ಮೈಸೂರು ನಗರ ಅಭಿವೃದ್ಧಿಗೊಳಿಸುವುದು

90 (1912) ಶ್ರೀ ತನ್ವೀರ್ ಸೇಠ್ (ನರಸಿಂಹರಾಜ):– ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–

ಅ) ಮೈಸೂರು ನಗರವನ್ನು ಸರ್ವಾಂಗೀಣ ಅಭಿವೃದ್ಧಿಗೊಳಿಸಲು ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು ;

ಆ) ಮೈಸೂರು ನಗರ ನಿವಾಸಿಗಳಿಗೆ ಮೂಲಭೂತ ಸೌಕರ್ಯಗಳ ಕೊರತೆ ಇದ್ದು ; ಇದನ್ನು ಒದಗಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳಾವುವು ;

ಇ) ಈ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸುಗಮ ವಾಹನ ಸಂಚಾರಕ್ಕೆ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳೇನು ? (ಮಾಹಿತಿ ಒದಗಿಸುವುದು)

ಶ್ರೀ ವಿನಯಕುಮಾರ್ ಸೊರಕೆ (ಮಾನ್ಯ ನಗರಾಭಿವೃದ್ಧಿ ಸಚಿವರು):–

ಅ) ಮೈಸೂರು ನಗರದ ಸರ್ವಾಂಗೀಣ ಅಭಿವೃದ್ಧಿಗಾಗಿ ಮಾನ್ಯ ಮುಖ್ಯಮಂತ್ರಿಗಳ ನಗರೋತ್ಥಾನ ಹಂತ–1ರ ಯೋಜನೆಯಡಿ ರೂ. 100.00 ಕೋಟಿ ವಿಶೇಷ ಅನುದಾನ, ಹಂತ–2ರ ಯೋಜನೆಯಡಿ ರೂ. 100.00 ಕೋಟಿ ವಿಶೇಷ ಅನುದಾನ ಹಾಗೂ ಹಂತ–3ರ ಯೋಜನೆಯಡಿ ರೂ. 100.00 ಕೋಟಿ ವಿಶೇಷ ಅನುದಾನವನ್ನು ಒದಗಿಸಲಾಗಿದೆ. ಪ್ರಸ್ತುತ 2013–14ನೇ ಸಾಲಿನಲ್ಲಿ ಹಂತ–3ರ ಯೋಜನೆಯು ಜಾರಿಯಲ್ಲಿರುತ್ತದೆ. ಈ ಯೋಜನೆಗಳ ಪ್ರಗತಿ ವಿವರವನ್ನು ಅನುಬಂಧ–1ರಲ್ಲಿ ಲಗತ್ತಿಸಿದೆ.

ಮಾನ್ಯ ಮುಖ್ಯಮಂತ್ರಿಯವರು 2013–14ನೇ ಸಾಲಿನ ಆಯವ್ಯಯ ಘೋಷಣೆಯಲ್ಲಿ ಮೈಸೂರು ನಗರವು ಪಾರಂಪರಿಕ ನಗರವಾದ ಹಿನ್ನಲೆಯಲ್ಲಿ ಕೆಲವು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ರೂ. 100.00 ಕೋಟಿಗಳ ವಿಶೇಷ ಅನುದಾನವನ್ನು ಘೋಷಿಸಿದ್ದು, ಸದರಿ ಅನುದಾನದಲ್ಲಿ ಕೈಗೊಳ್ಳುವ ಕಾಮಗಾರಿಗೆ ಅನುಮೋದನೆ ನೀಡಲಾಗಿರುತ್ತದೆ.

2014–15ನೇ ಸಾಲಿನ ಆಯವ್ಯಯದಲ್ಲಿ ಮೈಸೂರು ನಗರದ ಹಲವು ಪಾರಂಪರಿಕ ಕಟ್ಟಡಗಳ ನವೀಕರಣಕ್ಕಾಗಿ ರೂ. 100.00 ಕೋಟಿಗಳನ್ನು ಘೋಷಿಸಿದ್ದು, ಸದರಿ ಅನುದಾನದಲ್ಲಿ ದೇವರಾಜ ಮಾರುಕಟ್ಟೆ ಅಭಿವೃದ್ಧಿ, ಲೌನ್ಸ್ ಡೌನ್ ಬಿಲ್ಡಿಂಗ್ ಮರು ನಿರ್ಮಾಣ/ನವೀಕರಣ, ಹಾರ್ಡಿಂಗ್ಸ್ ವೃತ್ತದಲ್ಲಿ ಜಯಚಾಮರಾಜೇಂದ್ರ ಒಡೆಯರ್ ಪ್ರತಿಮೆ ಸ್ಥಾಪನೆ ಮತ್ತು ದಸರಾ ಮೆರವಣಿಗೆ ಮಾರ್ಗದಲ್ಲಿ ಬರುವ ರಸ್ತೆಗಳನ್ನು ಮತ್ತು ಇರ್ವಿನ್ ರಸ್ತೆಯನ್ನು ಅಭಿವೃದ್ಧಿಪಡಿಸುವ ಕಾಮಗಾರಿಗಳಿಗೆ ಸರ್ಕಾರದ ಅನುಮೋದನೆಯನ್ನು ನೀಡಲಾಗಿರುತ್ತದೆ.

ಇದಲ್ಲದೆ 2014–15ನೇ ಸಾಲಿನಲ್ಲಿ ಮೈಸೂರು ನಗರಕ್ಕೆ ಎಸ್ಎಫ್ಸಿ ಮುಕ್ತ ನಿಧಿ ಅನುದಾನದಿಂದ ರೂ. 4256.55 ಲಕ್ಷಗಳು ಮತ್ತು 13ನೇ ಹಣಕಾಸು ಆಯೋಗದಡಿ

ರೂ. 1686.69 ಲಕ್ಷಗಳು ಸೇರಿದಂತೆ ಒಟ್ಟು ರೂ. 5943.24 ಲಕ್ಷಗಳ ಅನುದಾನವನ್ನು ಮೈಸೂರು ನಗರದ ಅಭಿವೃದ್ಧಿಗಾಗಿ ಒದಗಿಸಲಾಗಿದೆ.

ಮೈಸೂರು ನಗರವು ಕೇಂದ್ರ ಸರ್ಕಾರದ ಜೆ.ಎನ್. ನರ್ಮ್ ಯೋಜನೆಯಡಿಯಲ್ಲಿ ಸೇರಿದೆ.

ಆ) ಮೈಸೂರು ನಗರದ ಮೂಲಭೂತ ಸೌಕರ್ಯಗಳಿಗಾಗಿ ಸರ್ಕಾರವು ವಿಶೇಷವಾಗಿ ಮೈಸೂರು ನಗರಕ್ಕೆ ಮಾನ್ಯ ಮುಖ್ಯಮಂತ್ರಿಗಳ ವಿಶೇಷ ಅನುದಾನ ರೂ. 100.00 ಕೋಟಿ ಹಂತ–1, ಹಂತ–2, ಹಾಗೂ ಹಂತ–3ರಲ್ಲಿ ಒಟ್ಟಾರೆಯಾಗಿ ರೂ. 300.00 ಕೋಟಿ ಅನುದಾನವನ್ನು ಒದಗಿಸಲಾಗಿದೆ ಮತ್ತು 13ನೇ ಹಣಕಾಸು ಆಯೋಗದ ಅನುದಾನ ಹಾಗೂ ಎಸ್.ಎಫ್.ಸಿ. ಅನುದಾನದಡಿ ಘನತ್ಯಾಜ್ಯ ವಸ್ತು ನಿರ್ವಹಣೆ, ರಾಜೀವ್ ಆವಾಸ್ ಯೋಜನೆಯಡಿಯಲ್ಲಿ 14 ಸ್ಲಮ್‌ಗಳ ಅಭಿವೃದ್ಧಿಗಾಗಿ ರೂ. 15,192.96 ಲಕ್ಷಗಳ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಈ ಅನುದಾನಗಳಡಿಯಲ್ಲಿ ರಸ್ತೆ, ಚರಂಡಿ, ವಿದ್ಯುತ್ ದೀಪ, ಉದ್ಯಾನವನಗಳ ಅಭಿವೃದ್ಧಿ ಹಾಗೂ ಇತರೆ ಮನೆಗಳ ನಿರ್ಮಾಣ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಮೈಸೂರು ನಗರದ ನಿವಾಸಿಗಳಿಗೆ ಮೂಲಭೂತ ಸೌಕರ್ಯವನ್ನು ಒದಗಿಸಲು ಸರ್ಕಾರವು ಜೆಎನ್‌ನರ್ಮ್ ಯೋಜನೆಯನ್ನು ಮೈಸೂರು ನಗರದಲ್ಲಿ ಅನುಷ್ಠಾನಗೊಳಿಸುತ್ತಿದೆ. ಜೆಎನ್‌ನರ್ಮ್ ಯೋಜನೆಯಡಿಯಲ್ಲಿ ಮೈಸೂರು ನಗರದಲ್ಲಿ ಅನುಷ್ಠಾನಗೊಳ್ಳುತ್ತಿರುವ ಯೋಜನೆಗಳ ವಿವರಗಳು ಈ ಕೆಳಕಂಡಂತಿವೆ.

ಹಂತ–1–ಒಟ್ಟು ರೂ. 1137.49 ಕೋಟಿ ಮೊತ್ತದ 14 ಯೋಜನೆಗಳು ನಗರ ಮೂಲಸೌಕರ್ಯ ಆಡಳಿತ (UIG) ಮತ್ತು ನಗರದ ಬಡಜನತೆಗೆ ಮೂಲ ಸೇವೆಗಳು (BSUP) ಉಪಅಭಿಯಾನದಡಿಯಲ್ಲಿ ಮಂಜೂರಾಗಿವೆ.

ಸ್ಥಿತ್ಯಂತರ ಹಂತ–ಯುು.ಐ.ಜಿ. ಉಪ ಅಭಿಯಾನದಡಿಯಲ್ಲಿ ಒಟ್ಟು ರೂ. 280.62 ಕೋಟಿ ಮೊತ್ತದ 5 ಯೋಜನೆಗಳು ಹಾಗೂ ನಗರ ಸಾರಿಗೆ ಉಪ ಅಭಿಯಾನದಡಿಯಲ್ಲಿ ರೂ. 66.06 ಕೋಟಿ ಮೊತ್ತದ 2 ಯೋಜನೆಗಳು ಅನುಮೋದನೆಗೊಂಡಿವೆ.

ಇ) ಮೈಸೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ ಸುಗಮ ವಾಹನ ಸಂಚಾರಕ್ಕಾಗಿ ನಗರೋತ್ಥಾನ 2 ಮತ್ತು 3ನೇ ಹಂತದಲ್ಲಿ ರೂ. 100.00 ಕೋಟಿ ಅನುದಾನದಡಿ ಒಟ್ಟು ರೂ. 10.00 ಕೋಟಿ ಅನುದಾನವನ್ನು ಮೀಸಲಿರಿಸಿದ್ದು, ಈ ಅನುದಾನದಡಿ 2ನೇ ಹಂತದಲ್ಲಿ ಸಂಚಾರ ವ್ಯವಸ್ಥೆ ಸುಧಾರಣೆಗಾಗಿ ಮತ್ತು 3ನೇ ಹಂತದಲ್ಲಿ ನಗರದ ಪ್ರಮುಖ ಸ್ಥಳಗಳಲ್ಲಿ ಇರುವ ಸಿ.ಸಿ. ಟಿವಿ ಕ್ಯಾಮರಾಗಳ ನಿರ್ವಹಣೆಗಾಗಿ ಮತ್ತು ಪ್ರಮುಖ ವೃತ್ತಗಳಲ್ಲಿ 10 ಕಡೆ ಸಿಗ್ನಲ್ ಲೈಟ್ ಅಳವಡಿಕೆ ಹಾಗೂ ನಗರದ ವ್ಯಾಪ್ತಿಯಲ್ಲಿ 16 ಟ್ಯೂಬ್ ಇರುವ ಒಂದು ವೀಡಿಯೋ ವಾಲ್‌ನ್ನು ವಾಹನಗಳ ಸುಗಮ ಸಂಚಾರ ವ್ಯವಸ್ಥೆಗಾಗಿ ಅನುಕೂಲವಾಗುವಂತೆ ಯೋಜನೆಯನ್ನು ಕೈಗೊಂಡಿದ್ದು ಕ್ರಮವಹಿಸಲಾಗುತ್ತಿದೆ.

ಮೈಸೂರು ನಗರದ ವ್ಯಾಪ್ತಿಯಲ್ಲಿ ಸುಗಮ ವಾಹನ ಸಂಚಾರಕ್ಕಾಗಿ ಜೆಎನ್‌ನರ್ಮ್ ಹಂತ–1ರಲ್ಲಿ 4 ಯೋಜನೆಗಳು ಮಂಜೂರಾಗಿವೆ.

ಒಟ್ಟು ರೂ. 153.54 ಕೋಟಿ ಮೊತ್ತದಲ್ಲಿ ಮಂಜೂರಾಗಿರುವ 3 ಸಾರಿಗೆ ವಲಯದ ಯೋಜನೆಗಳನ್ನು ಕೆಎಸ್‌ಆರ್‌ಟಿಸಿ ಅನುಷ್ಠಾನಗೊಳಿಸಿದ್ದು, ಎಲ್ಲಾ 3 ಯೋಜನೆಗಳು ಪೂರ್ಣಗೊಂಡಿರುತ್ತದೆ.

ಒಟ್ಟು ರೂ. 239.50 ಕೋಟಿ ಮೊತ್ತದಲ್ಲಿ ಹೊರ ವರ್ತುಲ ರಸ್ತೆ ಯೋಜನೆಯನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (MUDA) ವು ಸುಗಮ ವಾಹನ ಸಂಚಾರಕ್ಕಾಗಿ ಅನುಷ್ಠಾನಗೊಳಿಸುತ್ತದೆ. ಶೇ. 80% ಭೌತಿಕ ಪ್ರಗತಿಯನ್ನು ಯೋಜನೆಯಲ್ಲಿ ಸಾಧಿಸಲಾಗಿದೆ.

ಸ್ಥಿತ್ಯಂತರ ಹಂತ :– ಒಟ್ಟು ರೂ. 66.63 ಕೋಟಿ ಅಂದಾಜು ಮೊತ್ತದ 4 ಯೋಜನೆಗಳು UIG ಉಪ ಅಭಿಯಾನದಡಿಯಲ್ಲಿ ಹಾಗೂ ರೂ. 66.06 ಕೋಟಿ ಮೊತ್ತದ 2 ಯೋಜನೆಗಳು ನಗರ ಸಾರಿಗೆ ಉಪ ಅಭಿಯಾನದಡಿಯಲ್ಲಿ ಸ್ಥಿತ್ಯಂತರ ಹಂತದಲ್ಲಿ ಅನುಮೋದನೆಗೊಂಡಿವೆ.

ಅನುಬಂಧ-1

ಕ್ರಮ ಸಂಖ್ಯೆ	ಅನುದಾನಗಳ ವಿವರ	ಸಾಲು	ಲಕ್ಷ್ಯಗಳಲ್ಲಿ	ಒಟ್ಟು ಕಾಮಗಾರಿಗಳು	ಪೂರ್ಣಗೊಂಡಿರುವ ಕಾಮಗಾರಿಗಳು	ಪ್ರಗತಿಯಲ್ಲಿರುವ ಕಾಮಗಾರಿಗಳು	ಟೆಂಡರ್ ಪ್ರಕ್ರಿಯೆಯಲ್ಲಿರುವ ಕಾಮಗಾರಿಗಳು	ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಆಗಬೇಕಾಗಿರುವುದು	ಪರಿಷ್ಕೃತ
									ಕ್ರಿಯಾ ಯೋಜನೆಯನ್ನು ಸರ್ಕಾರಕ್ಕೆ ಸಲ್ಲಿಸುವುದು.
1	ಮಾಜಿ ಮುಖ್ಯಮಂತ್ರಿಗಳ ಪಗರೋಡ್ಡಾಪ ರೂ.100.00 ಕೋಟಿ ವಿಶೇಷ ಅನುದಾನ(1ನೇ ಹಂತ)	2009-10 ರಿಂದ 2011-12	10000.00	136.00	130 00	6.00	0.00	0.00	0.00
2	ಮಾಜಿ ಮುಖ್ಯಮಂತ್ರಿಗಳ ಪಗರೋಡ್ಡಾಪ ರೂ.100.00 ಕೋಟಿ ವಿಶೇಷ ಅನುದಾನ(2ನೇ ಹಂತ)	2011-12 ರಿಂದ 13-14	10000.00	174.00	127 00	17 00	18.00	4.00	8.00
3	ಮಾಜಿ ಮುಖ್ಯಮಂತ್ರಿಗಳ ಪಗರೋಡ್ಡಾಪ ರೂ.100.00 ಕೋಟಿ ವಿಶೇಷ ಅನುದಾನ(3ನೇ ಹಂತ)	2013-14 ರಿಂದ 15-16	ಸರ್ಕಾರದಿಂದ ಕ್ರಿಯಾಯೋಜನೆಗೆ ಅನುಮೋದನೆಯಾಗಿರುವುದಿ.						
4	ರಾಜ್ಯ ಹಣಕಾಸು ಆಯೋಗ ಅನುದಾನದ (ಎಸ್.ಎಫ್.ಸಿ) ಪ್ರೋತ್ಸಾಹಕ ಧನ (incentivisation Work) ಕಾಮಗಾರಿಗಳ ವಿವರ	2012-13	87.87	3.00	--	--	--	--	--
5	ರಾಜ್ಯ ಹಣಕಾಸು ಆಯೋಗ ಅನುದಾನದ (ಎಸ್.ಎಫ್.ಸಿ) (ಭಾಗ -ಎ) + (ಭಾಗ - ಬಿ) ಕಾಮಗಾರಿಗಳ ವಿವರ	2012-13	1756.4	63.00	48.00	5.00	6.00		4.00
6	13ನೇ ಹಣಕಾಸು ಆಯೋಗದ(ಜನರಲ್ ಪರ್‌ಫಾರ್ಮೆನ್ಸ್ ಗ್ರಾಂಟ್) ಅನುದಾನದಲ್ಲಿ ಕೈಗೊಂಡಿರುವ ಕಾಮಗಾರಿಗಳ ವಿವರ	2012-13	518.88	72.00	-	67.00	5.00	-	-

ಕ್ರಮ ಸಂಖ್ಯೆ	ಆಯವ್ಯಯದ ವಿವರ	ಸಾಲು	ಅನುಷ್ಠಾನದಲ್ಲಿ	ಒಟ್ಟು ಅಧಿಕಾರಿಗಳು	ಮಂಜೂರಾಗಿರುವ ಅಧಿಕಾರಿಗಳು	ಭರ್ತಿಯಾಗಿರುವ ಅಧಿಕಾರಿಗಳು	ಹೆಚ್ಚುವರಿ ಭರ್ತಿಯಾಗಿರುವ ಅಧಿಕಾರಿಗಳು	ಸರ್ಕಾರದಿಂದ ಅಗತ್ಯವಿರುವ ಅಧಿಕಾರಿಗಳನ್ನು ಆಯ್ಕೆ ಮಾಡಿಕೊಳ್ಳುವುದು	ಷರಾ ಕ್ರಮವನ್ನು ಸರ್ಕಾರಕ್ಕೆ ಸಲ್ಲಿಸಬಹುದು.
7	13ನೇ ಹಣಕಾಸು ಆಯೋಗದ(ಜಿಲ್ಲಾ ಪಂಚಾಯತ್ ಗ್ರಾಮಾಂತರ) ಅನುದಾನದಲ್ಲಿ ಕೈಗೊಂಡಿರುವ ಅಧಿಕಾರಿಗಳ ವಿವರ	2012-13	695.56	71.00	60.00	3.00	7.00	–	1.00
2013-14									
1	ಮೈಸೂರು ನಗರದ ಮತ್ತು ಸುತ್ತಮುತ್ತಲಿನ ಪ್ರದೇಶಗಳಿಗೆ ಸಮಗ್ರ ಕುಡಿಯುವ ನೀರನ್ನೊದಗಿಸುವ ಹಿನ್ನಲೆಯಲ್ಲಿ ಮೂಲ ಸೌಕರ್ಯ ಅಭಿವೃದ್ಧಿಗಾಗಿ ನೀಡಿರುವ ರೂ.100.00 ಕೋಟಿ ವಿಶೇಷ ಅನುದಾನದ ಅಧಿಕಾರಿಗಳ ವಿವರ	2013-14	10000	119.00	103.00	–	–	14.00	–
2	13ನೇ ಹಣಕಾಸು ಆಯೋಗದ (ಜಿಲ್ಲಾ ಪಂಚಾಯತ್ ಗ್ರಾಮಾಂತರ) ಅನುದಾನದಲ್ಲಿ ಕೈಗೊಂಡಿರುವ ಅಧಿಕಾರಿಗಳ ವಿವರ	2013-14	824.21	91.00	88.00	3.00	–	–	–
3	13ನೇ ಹಣಕಾಸು ಯೋಜನೆಯಡಿ (ರಸ್ತೆ ಮತ್ತು ಸೇತುವೆ)ಯ ಅನುದಾನದ ಅಧಿಕಾರಿಗಳ ವಿವರ	2013-14	853.00	14.00	1.00	12.00	–	1.00	–
4	ಡಸ್ಕಾ ಅನುದಾನದಲ್ಲಿ ಕೈಗೊಂಡಿರುವ ಅಧಿಕಾರಿಗಳ ವಿವರ	2013-14	1900.00	110.00	102.00	8.00	–	–	27.00
2014-15									

ಕ್ರಮ ಸಂಖ್ಯೆ	ಅನುದಾನಗಳ ವಿವರ	ಸಾಲು	ಲಕ್ಷಗಳಲ್ಲಿ	ಒಟ್ಟು ಕಾಮಗಾರಿಗಳು	ಪೂರ್ಣಗೊಂಡಿರುವ ಕಾಮಗಾರಿಗಳು	ಪ್ರಗತಿಯಲ್ಲಿರುವ ಕಾಮಗಾರಿಗಳು	ಟೆಂಡರ್ ಪ್ರಕ್ರಿಯೆಯಲ್ಲಿರುವ ಕಾಮಗಾರಿಗಳು	ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಆಗಬೇಕಾಗಿರುವುದು	ಪರಿಷ್ಕೃ ಕ್ರಿಯಾ ಯೋಜನೆಯನ್ನು ಸರ್ಕಾರಕ್ಕೆ ಸಲ್ಲಿಸುವುದು.
1	2014-15 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-320 ರಲ್ಲಿ ,ಮೈಸೂರು ನಗರಕ್ಕೆ ಘೋಷಿಸಿರುವ ಘೋಷಣೆಯನ್ವಯ ರೂ.100.00 ಕೋಟಿಗಳ ವಿಶೇಷ ಅನುದಾನದಲ್ಲಿ ಪಾರಂಪರಿಕ ಕಟ್ಟಡಗಳು ಮತ್ತು ಪ್ರವಾಸಿಗಳ ಅಭಿವೃದ್ಧಿ ಕಾಮಗಾರಿಗಳ ವಿವರ	2013-14	10000.00	17.00	-	-	-	-	-
2	13ನೇ ಹಣಕಾಸು ಯೋಜನೆಯಡಿ (ರಸ್ತೆ ಮತ್ತು ಸೇತುವೆ)ಯ ಅನುದಾನದ ಕಾಮಗಾರಿಗಳ ವಿವರ	2014-15	916.00	25.00	ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ.				
3	ದಸರಾ ಅನುದಾನದಲ್ಲಿ ಕೈಗೊಂಡಿರುವ ಕಾಮಗಾರಿಗಳ ವಿವರ	2014-15	500.00	37.00	23.00	11.00	3.00	-	6.00

ಶ್ರೀ ತನ್ವೀರ್ ಸೇಠ್ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ಈಗಾಗಲೇ ತಮಗೆ ಗೊತ್ತಿರುವ ಹಾಗೆ ಮೈಸೂರು ಒಂದು ಐತಿಹಾಸಿಕ ನಗರ. ಒಂದು ದಿಕ್ಕು ದೆಸೆಯಿಲ್ಲದೆ ಕೋಟ್ಯಾಂತರ ರೂಪಾಯಿ ತೆಗೆದುಕೊಂಡು ಹೋಗಿ ಅಲ್ಲಿ ಹಾಕುವುದರಲ್ಲಿ ಅರ್ಥವಿಲ್ಲ. ನಮ್ಮ ಮಹಾ ಯೋಜನೆ ಸಿದ್ಧಾವಾಗಿದ್ದಂತಹ ಸಂದರ್ಭದಲ್ಲಿ ನಾವು ಅನೇಕ ಸಲಹೆಗಳನ್ನು ಕೊಟ್ಟಿದ್ದೇವೆ. ಅದು ಯಾವುದೂ ಪರಿಗಣಿಸದೆ ಮಹಾ ಯೋಜನೆಯನ್ನು ಇವರು ಯಥಾವತ್ತಾಗಿ ಮಂಜೂರು ಮಾಡುವುದಕ್ಕೆ ಹೊರಟಿದ್ದಾರೆ. ಮೈಸೂರಿನ ಪರಿಸ್ಥಿತಿಯನ್ನು ಹಾಳು ಮಾಡುವಂತಹ ಸನ್ನಿವೇಶ ಬಂದಂತಹ ಸಂದರ್ಭದಲ್ಲಿ ಎಷ್ಟೇ ಹಣ ಹಾಕಿದರೂ ಸಾಲದು. ಆ ಕಾರಣದಿಂದ ನಾನು ಮಾನ್ಯ ಸಚಿವರಿಗೆ ಹೇಳುತ್ತೇನೆ. ಆ ಸಿಡಿಪಿ ಏನು ಇವತ್ತು ಏನು ಸಿದ್ದವಾಗಿದೆ, ಅದು ಯಾವುದೇ ಪರಿಸ್ಥಿತಿಯಲ್ಲಿ ಅದನ್ನು ಪೂರ್ಣಗೊಳಿಸುವುದಕ್ಕೆ ನ್ಯಾಯಾಲಯದ ಮುಂದೆ ಎಂಟು ತಿಂಗಳ ಕಾಲಾವಕಾಶ ಕೇಳಿದ್ದಾರೆ. ಮೈಸೂರಿಗೆ ವಾಪಸ್ ಕಳುಹಿಸಿ ಕೊಟ್ಟರೆ ಏನು ಬೇಕೆಂದು ನಾವು ಚರ್ಚೆ ಮಾಡಿ ಮತ್ತೆ ಸಲ್ಲಿಸುವ ಬಗ್ಗೆ ನಾವು ನಿನ್ನೆ ಮೊನ್ನೆ ಚರ್ಚೆ ಮಾಡಿದ್ದೇವೆ. ಕಸ ವಿಲೇವಾರಿ ಮಾಡುವಂಥದ್ದಾಗಿರಬಹುದು, STP ಮಾಡುವಂಥದ್ದಾಗಿರಬಹುದು, ಮಾರುಕಟ್ಟೆ ಎಲ್ಲಿ ಬರಬೇಕು, ಯಾವುದೇ ಮುಂದಿನ ಆಲೋಚನೆ ಇಲ್ಲದೆ ಕೇವಲ ನಾವು ಸರ್ಕಾರದಿಂದ ಹಣ ಕೊಡುತ್ತೇವೆ, ಖರ್ಚು ಮಾಡುತ್ತೇವೆಂದರೆ ಇದು ಸಾಲದು ಎಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ವಿನಯಕುಮಾರ್ ಸೊರಕೆ (ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿದಂಥ ಪ್ರಶ್ನೆಗಳಿಗೆ ಈಗಾಗಲೇ ಉತ್ತರವನ್ನು ಒದಗಿಸಿದ್ದೇವೆ. ಸರ್ವಾಂಗೀಣ ಅಭಿವೃದ್ಧಿ ಬಗ್ಗೆ ಎಷ್ಟು ಅನುದಾನವನ್ನು ನಾವು ಖರ್ಚು ಮಾಡುತ್ತಿದ್ದೇವೆ ಎನ್ನುವುದರ ಬಗ್ಗೆ ತಿಳಿಸಿದ್ದೇವೆ. ಇನ್ನು ಮೂಲಭೂತ ಸೌಲಭ್ಯಗಳ ಕೊರತೆಗಳ ಬಗ್ಗೆ ಯಾವ ರೀತಿಯಲ್ಲಿ ಕಾರ್ಯಕ್ರಮಗಳನ್ನು ಒದಗಿಸಬಹುದು ಎನ್ನುವುದರ ಬಗ್ಗೆ ಕೂಡ ನಾವು ತಿಳುವಳಿಕೆಗಳನ್ನು ಕೊಟ್ಟಿದ್ದೇವೆ. ಸುಗಮ ವಾಹನಗಳ ಸಂಚಾರದ ಬಗ್ಗೆ....

ಅಧ್ಯಕ್ಷರು : ಈಗ ಅವರ ಪ್ರಶ್ನೆ ಇರುವುದು ಇಷ್ಟೆ, ಅದೇನೆಂದರೆ, ಇನ್ನೊಂದು ಬಾರಿ ನಮ್ಮ ಜೊತೆ ಚರ್ಚೆ ಮಾಡಿ, ನಾವು ಅನೇಕ ಸಲಹೆಗಳನ್ನು ಕೊಡುತ್ತೇವೆ ಎನ್ನುತ್ತಿದ್ದಾರೆ.

ಶ್ರೀ ವಿನಯಕುಮಾರ್ ಸೊರಕೆ : ಮಹಾ ಯೋಜನೆ ಬಗ್ಗೆ ಕೂಡ ಸದಸ್ಯರುಗಳ ಸಲಹೆ ಪ್ರಕಾರವೇ ನಾವು ಅಂತಿಮ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಅವಕಾಶವಾಗಲಿಲ್ಲ. ಆದಷ್ಟು ಶೀಘ್ರವಾಗಿ ಅವರ ಸಲಹೆ ಸೂಚನೆಗಳನ್ನು ತೆಗೆದುಕೊಂಡು ಅದನ್ನು ಅಂತಿಮಗೊಳಿಸುವಂಥ ಕಾರ್ಯಕ್ರಮವನ್ನು ಮಾಡುತ್ತೇವೆ.

ಶ್ರೀ ತನ್ವೀರ್ ಸೇಠ್ : ಆಗಬಹುದು.

ಅಧ್ಯಕ್ಷರು : ಓ.ಕೆ.